

**ರೆಸ್ಟೋರೆಂಟಿನಲ್ಲಿ ಕೂತಿದ್ದ ಜೋಡಿಗಳು ತಮ್ಮ ಪ್ರೀತಿಯನ್ನು ಸಂಪಾದಿಸಿದ್ದು ಹೇಗೆ? ಹಣದಿಂದಲೇ? ಮಾತಿನಿಂದಲೇ? ಆತ್ಮವಿಶ್ವಾಸದಿಂದಲೇ? ಅವರೆಲ್ಲ ಸುಲಭವಾಗಿ ಗೆಲ್ಲುವ ಅದೇ ಪ್ರೀತಿಯಲ್ಲಿ ನಾನೇಕೆ ಮತ್ತೆಮತ್ತೆ ಸೋಲುತ್ತಿದ್ದೇನೆ? ಸಾತ್ವಿಕ್ ತನ್ನಲ್ಲೇ ಕೇಳಿಕೊಂಡ...**

ಅಂತೂ ಇಂತೂ ಮದುವೆ ನಿಕ್ಕಿಯಾಯಿತು!

ಸ್ವಯಂವರದಲ್ಲಿ ಬಿಲ್ಲನ್ನು ಮುರಿಯಲಾಗದ ಹ್ಯಾಪನಂತೆ ಡಜನ್‌ಗೂ ಹೆಚ್ಚಿನ ಹುಡುಗಿಯರಿಂದ ತಿರಸ್ಕೃತನಾಗಿ ಇನ್ನೇನು ಕಾವಿ ತೊಟ್ಟು ಹಿಮಾಲಯಕ್ಕೆ ಟಿಕೇಟು ಬುಕ್ ಮಾಡಬೇಕೆನ್ನುವಷ್ಟರಲ್ಲಿ ಕೊನೆಗೂ ವೈಶಾಲಿ ನನ್ನನ್ನು ಒಪ್ಪಿದಳು. ಹಾಗೆ ನೋಡಿದರೆ ಇಪ್ಪತ್ತೊಂದನೇ ಶತಮಾನದ ಪ್ರಬಲ, ಸಬಲ, ಸ್ವತಂತ್ರ ಹುಡುಗಿಯರಿಂದ ತಿರಸ್ಕೃತನಾಗಿದ್ದರಲ್ಲಿ ನನ್ನ ತಪ್ಪು ಕಡಿಮೆ, ವಿಧಿಯ ಆಟ ಜಾಸ್ತಿಯೆಂದೇ ಹೇಳಬೇಕು. ಬ್ರೋಕರ್‌ನ ಫೈಲುಗಳಲ್ಲಿ, ಮ್ಯಾಟ್ರಿಮೋನಿ ಸೈಟುಗಳಲ್ಲಿ, ಸಂಬಂಧಿಕರ ಸಲಹೆಗಳಲ್ಲಿ ಸಿಕ್ಕ, ಮದುವೆಗೆ ತಯಾರಾಗಿ ನಿಂತಿರುವ ಹುಡುಗಿಯರ ಸಂಖ್ಯೆ ಹಲವಿತ್ತಾದರೂ ಅವರ 'ಯೋಗ್ಯತಾ ಪಟ್ಟಿ'ಯ ಅರ್ಧಕ್ಕಿಂತ ಹೆಚ್ಚಿನ ಕರಾರುಗಳಿಂದ ನಾನು ಹೊರತಾಗಿದ್ದೆ. ಬಾಲ್ಯದಲ್ಲೇ ಕಾಂಪ್ಲಾನ್, ಬೂಸ್ಟ್‌ಗಳನ್ನು ಕುಡಿದು ಕಂಬದಂತೆ ಎತ್ತರಕ್ಕೆ ಬೆಳದ ಈಗಿನ ಹುಡುಗಿಯರಿಗೆ ಹೇಗೆ ಅಳೆದರೂ ಐದಡಿಯನ್ನು ಕೊಂಚವೇ ಮೀರುವ ನನ್ನ ಎತ್ತರ ಸರಿಹೊಂದುತ್ತಿರಲಿಲ್ಲ. ಅಪ್ಪಿತಪ್ಪಿ ಬ್ರಹ್ಮ ಸ್ಕೇಲು ಮರೆತು ಸೃಷ್ಟಿಸಿದ ಕುಳ್ಳ ಹೆಣ್ಣೊಬ್ಬಳ ಸಂಬಂಧ ಮಾತುಕತೆಗೆ ಸಿಕ್ಕರೂ ಅವರ ಉಳಿದ ಮಾನದಂಡಗಳು ಹೊಂದಿಕೆಯಾಗದೇ ಎಲ್ಲವೂ ದಂಡವಾಗುತ್ತಿತ್ತು. ಸಾಲದ್ದಕ್ಕೆ ಹೆಣ್ಣು ನೋಡುವ ಶಾಸ್ತ್ರವೆನ್ನುವ, ಜಗತ್ತಿನ ಅತ್ಯಂತ ಒತ್ತಡಮಯ ಪರೀಕ್ಷೆಯಲ್ಲಿ ಭಯ, ಟೆನ್ಶನ್ ಹಾಗೂ ಗಾಬರಿಯಿಂದ ನಾನು ತೋರುತ್ತಿದ್ದ ಯಡವಟ್ಟು ನಡವಳಿಕೆ ಹುಡುಗಿ ಹಾಗೂ ಅವರ ಮನೆಯವರ ಬಾಯಲ್ಲಿ 'ನಾವು ಫೋನ್ ಮಾಡಿ ಹೇಳ್ತೇವೆ' ಎಂಬ ಪರೋಕ್ಷ ತಿರಸ್ಕಾರದ ಮುತ್ತನ್ನು ಉದುರಿಸುತ್ತಿದ್ದವು. ಹೀಗೆ ಇನ್ನೇನು ಅಖಿಲ ಭಾರತ ಬ್ರಹ್ಮಚಾರಿಗಳ ಸಂಘದ ಆಜೀವ ಸದಸ್ಯನಾಗಬೇಕೆನ್ನುವಷ್ಟರಲ್ಲಿ ಕಹಾನೀ ಮೇ ಟ್ವಿಸ್ಟ್ ಎಂಬಂತೆ ಕತೆಯೊಳಕ್ಕೆ ತೂರಿಬಂದ ವೈಶಾಲಿ ನನ್ನನ್ನು ಒಪ್ಪುವ ಮೂಲಕ ಹಿಮಾಲಯವನ್ನು ಬಚಾವ್ ಮಾಡಿದಳು.

★★★

ಕೈಗೆ ಮೂರನೇ ಸಲ ಚೂಟಿಕೊಂಡ ಮೇಲೂ ನನಗೆ ನಂಬಿಕೆ ಬರಲಿಲ್ಲ. 'ಒಪ್ಪಿಗೆಯಾಗಿದೆ' ಎಂಬ ಮಾತಿಗಾಗಿ ಕಾದೂಕಾದೂ ಅವರು 'ಒಪ್ಪಿಗೆಯಿಲ್ಲ' ಎಂದದ್ದೂ 'ಇದೆ' ಎಂಬಂತೆ ಕೇಳಿಸಿತೇ? ಕಿವಿಗೆ ಒಳ್ಳೆಯದ್ದೊಂದು ಇಯರ್ ಡ್ರಾಪ್ಸ್